**ಸಮಗ್ರ ಶಿಕ್ಷಣ ಕರ್ನಾಟಕ**

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ,. ಕೆ,ಆರ್.ವೃತ್, ನೃಪತುಂಗ ರಸ್ತೆ, ಬೆಂಗಳೂರು-01**

===========================================================

ಸಂಖ್ಯೆ: ಸಶಿಅ/ಆಚ/ /RBI -ರಪ್ರಸ್ಪ/2023 ದಿನಾಂಕ: 01.06.2023

**ಸುತ್ತೋಲೆ**

**ವಿಷಯ**: ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆಯನ್ನು ಹಮ್ಮಿಕೊಳ್ಳುವ ಬಗ್ಗೆ.

**ಉಲ್ಲೇಖ**: ಜನರಲ್ ಮ್ಯಾನೇಜರ್, ಆರ್‌ಬಿಐ, ಕೆ ಆರ್.ವೃತ್, ನೃಪತುಂಗ ರಸ್ತೆ, ಬೆಂಗಳೂರು- ರವರ ಪತ್ರ ಸಂಖ್ಯೆ : BLRFIDD.LBS NO. 5373/02.04.001/2022-23 ಮತ್ತು ದಿನಾಂಕ : 03/02/2023

********

ಉಲ್ಲೇಖಿತ ವಿಷಯಕ್ಕೆ ಸಂಬಂಧಿಸಿದಂತೆ, ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ಶಾಲಾ ಮಕ್ಕಳಲ್ಲಿ ಆರ್ಥಿಕ ಸಾಕ್ಷರತೆಯನ್ನು ಹೆಚ್ಚಿಸಲು ಹಲವಾರು ಕ್ರಮಗಳನ್ನು ಪ್ರಾರಂಭಿಸಿದ್ದು,, ಪ್ರಸ್ತುತ ಸಾಲಿನಲ್ಲಿ ಶಾಲಾ ಮಕ್ಕಳಲ್ಲಿ ಆರ್ಥಿಕ ಶಿಕ್ಷಣದ ಪರಿಕಲ್ಪನೆಗಳ ಕುರಿತು ಹೆಚ್ಚಿನ ಅರಿವು ಮೂಡಿಸುವ ದೃಷ್ಟಿಯಿಂದ ರಾಜ್ಯದ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರಸಪ್ರಶ್ನೆ (Quiz Competition) ಸ್ಪರ್ಧೆಯನ್ನು ಆಯೋಜಿಸಿದೆ. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ , ಬ್ಯಾಂಕಿನ ವ್ಯವಸ್ಥೆ ಹಾಗೂ ದೇಶದ ಅರ್ಥವ್ಯವಸ್ಥೆಯ ಬಗ್ಗೆ ಹೆಚ್ಚಿನ ಜ್ಞಾನ ಹಾಗೂ ಕಲಿಕೆಯಲ್ಲಿ ಆಸಕ್ತಿಯನ್ನು ಮೂಡಿಸಲು ಪೂರಕವಾಗಿದೆ.

**ಉದ್ದೇಶಗಳು:**

- ವಿದ್ಯಾರ್ಥಿಗಳಿಗೆ ಆರ್ಥಿಕ ಸಾಕ್ಷರತೆಯ ಬಗ್ಗೆ ಅರಿವು ಮೂಡಿಸುವುದು.
- ವಿದ್ಯಾರ್ಥಿಗಳಲ್ಲಿ ಚಿಂತಿಸುವ, ವಿಶ್ಲೇಷಿಸುವ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸುವುದು.
- ವಿದ್ಯಾರ್ಥಿಗಳಲ್ಲಿ ಸಹಕಾರ ಮನೋಭಾವನೆ, ಗುಂಪು ಚರ್ಚೆ, ತೀಕ್ಷ್ಣ ನಿರ್ಧಾರ ತೆಗೆದು ಕೊಳ್ಳುವ, ಸ್ಪರ್ಧಾ ಪ್ರವೃತ್ತಿಯನ್ನು ಬೆಳೆಸುವುದು.
- ವಿದ್ಯಾರ್ಥಿಗಳಲ್ಲಿ ಭಾರತ ದೇಶದ ಅರ್ಥವ್ಯವಸ್ಥೆಯ ಬಗ್ಗೆ ಅರಿವು ಮೂಡಿಸುವುದು.

**ಅರ್ಹತೆ :**

ಸರ್ಕಾರಿ/ಕಾರ್ಪೋರೇಷನ್/ ನಗರ ಸ್ಥಳೀಯ ಸಂಸ್ಥೆಗಳು/ ಸಮಾಜ ಕಲ್ಯಾಣ ಇಲಾಖೆ ಹಾಗೂ ಬುಡಕಟ್ಟು ಕಲ್ಯಾಣ ಇಲಾಖೆ /ಕರ್ನಾಟಕ ವಸತಿ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ 8 ರಿಂದ 10ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಬಹುದು.

**ಸ್ಪರ್ಧೆಯ ಹಂತಗಳು :**

1. ಶಾಲಾ ಹಂತ
2. ಬ್ಲಾಕ್ ಹಂತ
3. ಪೂರ್ವ-ಜಿಲ್ಲಾ ಹಂತ (ಎಲಿಮಿನೇಷನ್ ರೌಂಡ್)
4. ಜಿಲ್ಲಾ ಹಂತ
5. ಪೂರ್ವ -ರಾಜ್ಯ ಹಂತ (ಎಲಿಮಿನೇಷನ್ ರೌಂಡ್)
6. ರಾಜ್ಯ ಹಂತ

ಪ್ರತಿ ಹಂತದ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದ ತಂಡವು ಮುಂದಿನ ಹಂತದ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ ಹಾಗೂ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ವಿಜೇತರಾದ ತಂಡಕ್ಕೆ ಪ್ರಮಾಣ ಪತ್ರ ಹಾಗೂ ನಗದು ಬಹುಮಾನ ನೀಡಲಾಗುವುದು.

**ಪ್ರಶಸ್ತಿಗಳ ವಿವರ :**

| ಕ್ರ.ಸಂ | ಬಹುಮಾನದ ವಿವರ | ಬ್ಲಾಕ್ ಹಂತ | ಜಿಲ್ಲಾ ಹಂತ | ರಾಜ್ಯ ಹಂತ |
|---|---|---|---|---|
| **1.** | ಪ್ರಥಮ ಬಹುಮಾನ | **5000/-** | **10000/-** | **20000/-** |
| **2.** | ದ್ವಿತೀಯ ಬಹುಮಾನ | **4000/-** | **7500/-** | **15000/-** |
| **3.** | ತೃತೀಯ ಬಹುಮಾನ | **3000/-** | **5000/-** | **10000/-** |

ಪೂರ್ವ-ಜಿಲ್ಲಾ ಮಟ್ಟದ ಎಲಿಮಿನೇಷನ್ ಸುತ್ತಿನ ಮತ್ತು ಪೂರ್ವ-ರಾಜ್ಯ ಮಟ್ಟದ ಎಲಿಮಿನೇಷನ್ ಸುತ್ತಿನ ವಿಜೇತರಿಗೆ ಯಾವುದೇ ಬಹುಮಾನಗಳನ್ನು ನೀಡಲಾಗುವುದಿಲ್ಲ.

**ಸ್ಪರ್ಧೆಯ ನೋಂದಣಿ ಮತ್ತು ಪ್ರಕ್ರಿಯೆ:**

**ಶಾಲಾ ಹಂತ :**

- ಶಾಲಾ ಹಂತದಲ್ಲಿ ಶಿಕ್ಷಕರು 8 ರಿಂದ 10 ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸ್ಪರ್ಧೆಗೆ ನೀಡಿರುವ ಪಠ್ಯವಿಷಯಗಳ ಬಗ್ಗೆ ತರಬೇತಿಯನ್ನು ನೀಡಿ ಸ್ಪರ್ಧೆಯನ್ನು ಹಮ್ಮಿಕೊಳ್ಳುವುದು.

- ಶಾಲಾ ಹಂತದಲ್ಲಿ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ಇಬ್ಬರು ವಿದ್ಯಾರ್ಥಿಗಳ ವಿವರಗಳನ್ನು ಮೊಬೈಲ್/ಲ್ಯಾಪ್ ಟಾಪ್/ಕಂಪ್ಯೂಟರ್ ಬಳಸಿ ವಿದ್ಯಾರ್ಥಿಗಳ ಸ್ಯಾಟ್ಸ್ ಐಡಿ, ಮೊಬೈಲ್ ಸಂಖ್ಯೆ, ಭಾವಚಿತ್ರದೊಂದಿಗೆ ವಿದ್ಯಾವಾಹಿನಿ ಪೋರ್ಟಲ್ ನಲ್ಲಿದಿನಾಂಕ : 19.06.2023 ರೊಳಗೆ ಕಡ್ಡಾಯವಾಗಿ ನೋಂದಣಿ ಮಾಡುವುದು. ವಿದ್ಯಾವಾಹಿನಿ ಲಿಂಕ್ – **www.vidyavahini.karnataka.gov.in or http://164.100.133.7**

- ವಿಜೇತರಾದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡುವ ಸಂಬಂಧ ಅವರವರ ವೈಯಕ್ತಿಕ ಖಾತೆಗೆ ನೇರವಾಗಿ ಹಣ ಜಮಾ ಮಾಡಲಿದ್ದು, ಈ ಪ್ರಯುಕ್ತ ವಿದ್ಯಾರ್ಥಿಗಳ ಬ್ಯಾಂಕ್ ಖಾತೆ

ಸಂಖ್ಯೆ, ಬ್ಯಾಂಕ್ ಹೆಸರು, ಶಾಖೆಯ ಹೆಸರು, ಐ.ಎಫ್.ಎಸ್.ಸಿ ಕೋಡ್, ಇತ್ಯಾದಿ ವಿವರಗಳನ್ನು ನೋಂದಣಿ ಸಮಯದಲ್ಲಿ ಮುಖ್ಯಶಿಕ್ಷಕರು ಭರ್ತಿ ಮಾಡುವುದು.( ಚಾಲನೆಯಲ್ಲಿರುವ ಬ್ಯಾಂಕ್ ಖಾತೆಯಾಗಿರುವುದು )

- ಶಾಲಾ ಹಂತದಲ್ಲಿ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಭಾಗವಹಿಸುವಂತೆ ಶಿಕ್ಷಕರು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು ಹಾಗೂ ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಹಂತದ ಸ್ಪರ್ಧೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡುವುದು.

**ಬ್ಲಾಕ್ ಹಂತ : (ಆಯಾ ಶಾಲೆಗಳಲ್ಲಿ)**

- ಶಾಲಾ ಮಟ್ಟದಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳು ತಾಲ್ಲೂಕು ಮಟ್ಟದ ಸ್ಪರ್ಧೆಗೆ ಅರ್ಹರಾಗಲಿದ್ದು, ಶಾಲಾ ಹಂತದಲ್ಲಿ ಮುಖ್ಯ ಶಿಕ್ಷಕರ ಉಪಸ್ಥಿತಿಯಲ್ಲಿ ತಾಲ್ಲೂಕು ಮಟ್ಟದ ಸ್ಪರ್ಧೆಯನ್ನು ಆನ್ ಲೈನ್ ಮೂಲಕ ದಿನಾಂಕ: 20.06.2023 ರಿಂದ 23.06.2023ರವರೆಗೆ ನಡೆಸಲಾಗುವುದು. ತಾಲ್ಲೂಕು ಮಟ್ಟದ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಲು **http://164.100.133.7:82 ಲಿಂಕ್ ನ್ನು ಬಳಸುವುದು.**
- ಸ್ಪರ್ಧೆ ನಡೆಯುವ ದಿನಾಂಕದಂದು ಇಲಾಖೆಯ / ಆರ್ ಬಿ ಐ ಸಿಬ್ಬಂದಿಗಳು ಭೇಟಿ ನೀಡುವ ಸಂಭವವಿರುತ್ತದೆ.
- ಪ್ರತಿ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಒಂದು ತಂಡದಲ್ಲಿ ಸ್ಪರ್ಧಿಸುತ್ತಾರೆ. ಈ ವಿದ್ಯಾರ್ಥಿಗಳು ಆಯಾ ಶಾಲೆಯನ್ನು ಪ್ರತಿನಿಧಿಸುವ ಸ್ಪರ್ಧಿಗಳಾಗಿರುತ್ತಾರೆ.
- ರಸಪ್ರಶ್ನೆ ಸ್ಪರ್ಧೆಯಲ್ಲಿ ಪ್ರತಿ ತಂಡಕ್ಕೆ 20 ಬಹು ಆಯ್ಕೆಯ ಪ್ರಶ್ನೆಗಳನ್ನು ನೀಡಿ 15 ನಿಮಿಷಗಳ ಕಾಲಾವಕಾಶ ನೀಡಲಾಗುತ್ತದೆ. ಕಡಿಮೆ ಸಮಯದಲ್ಲಿ ಹೆಚ್ಚು ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಸಲ್ಲಿಸಿದ ತಂಡವನ್ನು ಮುಂದಿನ ಹಂತದ ಸ್ಪರ್ಧೆಗೆ ಆಯ್ಕೆ ಮಾಡಲಾಗುವುದು.
- ರಸಪ್ರಶ್ನೆ ಸ್ಪರ್ಧೆಯ ಸಂದರ್ಭದಲ್ಲಿ ತಾಂತ್ರಿಕ ದೋಷ ಸಂಭವಿಸಿದಲ್ಲಿ ವಿದ್ಯಾರ್ಥಿಯು ಪುನ: ಸ್ಪರ್ಧೆಯಲ್ಲಿ ಭಾಗವಹಿಸಬಹುದು.
- ರಸಪ್ರಶ್ನೆಸ್ಪರ್ಧೆಯಲ್ಲಿ ಭಾಗವಹಿಸುವಾಗ ತಂಡವು ಪರದೆಯನ್ನು ಬಿಡಬಾರದು ಅಥವಾ ಕಿಟಕಿಯನ್ನು ಮುಚ್ಚಬಾರದು ಮತ್ತು ಯಾರ ಸಹಾಯವನ್ನೂ ಪಡೆಯಬಾರದು.
- ಒಂದು ಶಾಲೆಯ ಇಬ್ಬರು ವಿದ್ಯಾರ್ಥಿಗಳಿಗೆ ಒಂದು ಪ್ರಶ್ನೆ ಪತ್ರಿಕೆಯನ್ನು ಪ್ರದರ್ಶನ ಮಾಡಲಾಗುವುದು. ಈ ಇಬ್ಬರು ವಿದ್ಯಾರ್ಥಿಗಳು ಸೇರಿ ಯೋಚಿಸಿ, ಚರ್ಚಿಸಿ ಪ್ರಶ್ನೆಗಳಿಗೆ ಉತ್ತರಿಸುವುದು.

**ಜಿಲ್ಲಾ ಹಂತದ ರಸಪ್ರಶ್ನೆ ಸ್ಪರ್ಧೆ :**

- ತಾಲ್ಲೂಕು ಹಂತದ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು ವಿಜೇತರಾದ ತಂಡವು ಜಿಲ್ಲಾ ಹಂತದ ಸ್ಪರ್ಧೆಯಲ್ಲಿ ಭಾಗವಹಿಸುವುದು. ಬೆಳಗಾವಿ, ಚಿಕ್ಕೋಡಿ, ಮೈಸೂರು, ಮಂಡ್ಯ, ಹಾಸನ, ಚಿಕ್ಕಮಂಗಳೂರು, ದಕ್ಷಿಣ ಕನ್ನಡ, ಶಿವಮೊಗ್ಗ, ಹಾವೇರಿ, ಧಾರವಾಡ, ಬಿಜಾಪುರ, ಕಲಬುರಗಿ ಜಿಲ್ಲೆಗಳು ಆರಕ್ಕಿಂತ ಹೆಚ್ಚು ಬ್ಲಾಕ್‌ಗಳನ್ನು ಹೊಂದಿದ್ದು, ಜಿಲ್ಲಾ ಹಂತದ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಲು ಆಗಮಿಸಿರುವ ಎಲ್ಲಾ ತಂಡಗಳಿಗೆ ಮೊದಲು ಲಿಖಿತ ರೂಪದಲ್ಲಿ ಪ್ರಶ್ನೆಗಳನ್ನು ನೀಡಿ ಸ್ಪರ್ಧೆಯನ್ನು ನಡೆಸಿ 6 ತಂಡಗಳನ್ನು ಮಾತ್ರ ಆಯ್ಕೆ ಮಾಡುವುದು. ಇದು ಪೂರ್ವ ಜಿಲ್ಲಾ ಮಟ್ಟದ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ಎಲಿಮಿನೇಷನ್ ರೌಂಡ್ ಆಗಿರುತ್ತದೆ. ಈ ಹಂತದಲ್ಲಿ ವಿಜೇತರಾದ ತಂಡಕ್ಕೆ ಯಾವುದೇ ಬಹುಮಾನವನ್ನು ನೀಡಲಾಗುವುದಿಲ್ಲ. ಈ ಆರು ತಂಡಗಳಿಗೆ ಜಿಲ್ಲಾ ಹಂತದ ರಸಪ್ರಶ್ನೆ

ಸ್ಪರ್ಧೆಯನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಸಿಬ್ಬಂದಿಗಳು ನಡೆಸುವುದರಿಂದ ಇವರಿಗೆ ಜಿಲ್ಲಾ ಹಂತದಲ್ಲಿ ಡಿ.ಡಿ.ಪಿ.ಐ ಹಾಗೂ ಡಿ.ವೈ.ಪಿ.ಸಿರ ತಂಡವು ಸಂಪೂರ್ಣ ಸಹಕಾರ ನೀಡುವುದು ಹಾಗೂ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು.

- ಡಿ.ವೈ.ಪಿ.ಸಿ. ರವರು ಜಿಲ್ಲಾ ನೋಡೆಲ್ ಅಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುವುದು.
- ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಹಾಗೂ ಅವರನ್ನು ಕರೆತರುವ ಶಿಕ್ಷಕರಿಗೆ ಗೌರವಧನ ರೂ.**500/-**ಗಳನ್ನು ಪ್ರಯಾಣಭತ್ಯೆ, ಊಟ, ವಸತಿವ್ಯವಸ್ಥೆ ಮಾಡಲಾಗುವುದು. ಸದರಿ ಶಿಕ್ಷಕರನ್ನು ಮೌಲ್ಯಮಾಪನ ಕಾರ್ಯಕ್ಕಾಗಿ ಬಳಸಿಕೊಳ್ಳಬಹುದು.
- ಜಿಲ್ಲಾ ಮಟ್ಟದ ಸ್ಪರ್ಧೆಯು ನಡೆಯುವ ಸ್ಥಳವನ್ನು ತಿಳಿಸಲಾಗುವುದು ಹಾಗೂ ವೆಬ್ ಸೈಟ್ ನಲ್ಲಿಯೂ ನೀಡಲಾಗುವುದು.
- ಜಿಲ್ಲಾ ಹಂತದ ಸ್ಪರ್ಧೆಯನ್ನು ನಡೆಸಲು ರಸಪ್ರಶ್ನೆ ಸ್ಪರ್ಧೆಗಳನ್ನು ನಡೆಸಿ ಅನುಭವಯುಳ್ಳ, ಸ್ಪಷ್ಟವಾಗಿ ಉಚ್ಚರಿಸುವ, ಉತ್ತಮ ಪ್ರದರ್ಶನ ನೀಡುವ , ಕನ್ನಡ ಮತ್ತು ಇಂಗ್ಲೀಷ್ ಭಾಷೆಯ ಹಿಡಿತ ಹೊಂದಿರುವ ಇಬ್ಬರು ಕ್ವಿಜ್ ಮಾಸ್ಟರ್ ರನ್ನು ಗುರ್ತಿಸಿ ರಾಜ್ಯ ಕಚೇರಿಗೆ ಸಲ್ಲಿಸುವುದು.
- ಹಣಕಾಸಿನ ವ್ಯವಹಾರದ ಜ್ಞಾನ ಹೊಂದಿರುವ ಸಂಪನ್ಮೂಲ ವ್ಯಕ್ತಿಗಳಿಗೆ ಆದ್ಯತೆ ನೀಡುವುದು. ಇವರಿಗೆ ಆರ್ ಬಿ ಐ ವತಿಯಿಂದ ಪ್ರಯಾಣ ಭತ್ಯೆ, ಊಟ ಹಾಗೂ ಪ್ರತಿಯೊಬ್ಬರಿಗೆ ರೂ.5000/-ಗಳ ಗೌರವ ಧನ ನೀಡಲಾಗುವುದು.
- ಸ್ಪರ್ಧೆ ನಡೆಯುವ ಕೇಂದ್ರ ಸ್ಥಳದಿಂದ 75 ಕಿ ಮೀ ದೂರದಿಂದ ಬರುವ ಕ್ವಿಜ್ ಮಾಸ್ಟರ್/ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಅಗತ್ಯವಿದ್ದಲ್ಲಿ ಮಾತ್ರ ವಸತಿ ವ್ಯವಸ್ಥೆಯನ್ನು ಒದಗಿಸಲಾಗುವುದು.

**ರಾಜ್ಯ ಹಂತ :**

ಜಿಲ್ಲಾ ಹಂತದ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು ವಿಜೇತರಾದ ವಿದ್ಯಾರ್ಥಿಗಳು ಪೂರ್ವ ರಾಜ್ಯ ಹಂತದ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ. ರಾಜ್ಯ ಹಂತದ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಲು ಆಗಮಿಸಿರುವ ಎಲ್ಲಾ ತಂಡಗಳಿಗೆ ಆನ್‌ಲೈನ್ ಮೂಲಕ ಸ್ಪರ್ಧೆಯನ್ನು ಆಯ್ಕೆಯಾದ ವಿದ್ಯಾರ್ಥಿಗಳ ಶಾಲೆಗಳಲ್ಲಿ ಮುಖ್ಯ ಶಿಕ್ಷಕರ ಉಪಸ್ಥಿತಿಯಲ್ಲಿ ನಿಗದಿಪಡಿಸಿದ ದಿನಾಂಕದಂದು ಹಮ್ಮಿಕೊಳ್ಳುವುದು. ಈ ಹಂತದ ಸ್ಪರ್ಧೆಯಲ್ಲಿ ಕಡಿಮೆ ಸಮಯದಲ್ಲಿ ಹೆಚ್ಚು ಅಂಕಗಳನ್ನು ಪಡೆದ 6 ತಂಡಗಳನ್ನು ಮಾತ್ರ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದು. ಇದು ಪೂರ್ವ ರಾಜ್ಯ ಮಟ್ಟದ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ಎಲಿಮಿನೇಷನ್ ರೌಂಡ್ ಆಗಿರುತ್ತದೆ. ಈ ಹಂತದಲ್ಲಿ ವಿಜೇತರಾದ ತಂಡಕ್ಕೆ ಯಾವುದೇ ಬಹುಮಾನವನ್ನು ನೀಡಲಾಗುವುದಿಲ್ಲ. ಈ ಆರು ತಂಡಗಳಿಗೆ ರಾಜ್ಯ ಹಂತದ ರಸಪ್ರಶ್ನೆ ಸ್ಪರ್ಧೆಯನ್ನು ಬೆಂಗಳೂರಿನಲ್ಲಿ ಮುಖಾಮುಖಿಯಾಗಿ ಕ್ವಿಜ್ ಮಾಸ್ಟರ್ ಮೂಲಕ ನಡೆಸಲಾಗುವುದು. ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು, ಹಾಗೂ ಅವರನ್ನು ಕರೆತರುವ ಶಿಕ್ಷಕರು ಪ್ರಯಾಣ ಭತ್ಯೆ, ಊಟ, ವಸತಿ ವ್ಯವಸ್ಥೆ ಮಾಡಲಾಗುವುದು.

**ರಾಷ್ಟ್ರ ಹಂತ :**

ರಾಜ್ಯ ಹಂತದ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು ವಿಜೇತರಾದ ವಿದ್ಯಾರ್ಥಿಗಳು ರಾಷ್ಟ್ರ ಹಂತದ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

**ಸ್ಪರ್ಧಾ ಪಠ್ಯ ವಿಷಯ: -**

- ಸ್ಪರ್ಧೆಗೆ ಪ್ರಶ್ನೆಗಳು ಬ್ಯಾಂಕ್ ವ್ಯವಹಾರ ಪದ್ಧತಿ ಹಾಗೂ ಭಾರತ ದೇಶದ ಆರ್ಥಿಕ ವ್ಯವಸ್ಥೆ ವಿಷಯಗಳನ್ನು ಒಳಗೊಂಡಿರುತ್ತದೆ.
- ಶಿಕ್ಷಕರು ಕೆಳಕಂಡ ವೆಬ್‌ಸೈಟ್‌ನಲ್ಲಿ ಅಧ್ಯಯನ ಸಾಮಗ್ರಿಗಳನ್ನು ಪಡೆದು ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವುದು.

https://www.g20.org/en/

https://pib.gov.in/PressReleaseIframePage.aspx?PRID=1882356

**ಸಾಮಾನ್ಯ ಆರ್ಥಿಕ ಸಾಕ್ಷರತೆಗಾಗಿ :**

https://www.rbi.org.in/Scripts/AboutusDisplay.aspx

https://www.rbi.org.in/Scripts/FAQDisplay.aspx

https://www.ncfe.org.in/resources/downloads

**Relevant Headings for Study Materials:**

1. **Financial Education Handbook**
2. **Financial Literacy Booklets**
3. **All you Need to Know About Digital Payments**
4. **Insurance, Equity, Pension**
5. **Target Group Booklets-School Children**

**ಸ್ಪರ್ಧಾ ನಿಯಮಗಳು:**

- ಪ್ರತಿ ಹಂತದ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳಿಗೆ 20 ಬಹು ಆಯ್ಕೆಯ ಪ್ರಶ್ನೆಗಳಿಗೆ 15 ನಿಮಿಷಗಳ ಕಾಲಾವಕಾಶವನ್ನು ನೀಡಲಾಗಿದ್ದು, ಜಿಲ್ಲಾ ಹಾಗೂ ರಾಜ್ಯದ ಪೂರ್ವ ಹಂತದ ಸ್ಪರ್ಧೆಯ ಉತ್ತರ ಪತ್ರಿಕೆಗಳನ್ನು ನುರಿತ ಸಂಪನ್ಮೂಲ ಶಿಕ್ಷಕರಿಂದ ಮೌಲ್ಯಮಾಪನ ಮಾಡಲಾಗುವುದು. ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ತಂಡವನ್ನು ಆಯ್ಕೆಗೆ ಪರಿಗಣಿಸಲಾಗುವುದು.
- ಪ್ರಶ್ನೆ ಪತ್ರಿಕೆಯು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಇರುತ್ತದೆ.
- ಪ್ರತಿ ಸರಿಯಾದ ಉತ್ತರಕ್ಕೆ 1 ಅಂಕ ಹಾಗೂ ತಪ್ಪು ಉತ್ತರ ಹಾಗೂ ಪ್ರಶ್ನೆಯನ್ನು ಬಿಟ್ಟಲ್ಲಿ 0 ಅಂಕ ನಿಗಧಿಪಡಿಸಲಾಗಿದೆ.

- ಸ್ಪರ್ಧೆಯಲ್ಲಿ ಭಾಗವಹಿಸಿರುವಾಗ ವಿದ್ಯಾರ್ಥಿಗಳು ಯಾರ ಸಹಾಯವನ್ನೂ ಪಡೆಯಬಾರದು. (ಶಿಕ್ಷಕರು/ಪೋಷಕರು ಒಳಗೊಂಡಂತೆ) ಈ ಕಾರ್ಯಕ್ರಮವು ವಿದ್ಯಾರ್ಥಿಗಳ ಜ್ಞಾನಾರ್ಜನೆಯ ಬೆಳವಣಿಗೆಗೆ ಹಾಗೂ ಕಲಿಕೆಯಲ್ಲಿ ಆಸಕ್ತಿಯನ್ನು ವೃದ್ಧಿಸುವ ದೃಷ್ಟಿಯಿಂದ ಆಯೋಜಿಸಲಾಗಿದೆ.

❖ ಸ್ಪರ್ಧೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಲು ಹಾಗೂ ವಿವಿಧ ಹಂತಗಳಲ್ಲಿ ಫಲಿತಾಂಶವನ್ನು ಪರಿಶೀಲಿಸಲು ನಿಯಮಿತವಾಗಿ ವೆಬ್ ಪೋರ್ಟಲ್ ಗೆ ಭೇಟಿ ನೀಡುವುದು. ಇಲಾಖೆಯಿಂದ ಪ್ರತ್ಯೇಕ ಸಂವಹನ ನಡೆಸುವುದಿಲ್ಲ.

**ರಸಪ್ರಶ್ನೆ ಸ್ಪರ್ಧೆಯ ವೇಳಾಪಟ್ಟಿ**

| ಕ್ರ.ಸ. | ವಿಷಯ | ದಿನಾಂಕ | ಸ್ಥಳ |
|---|---|---|---|
| 1 | ಶಾಲಾ ಮಟ್ಟದಲ್ಲಿ ಶಿಕ್ಷಕರು ಸ್ಪರ್ಧೆ ನಡೆಸುವುದು ಹಾಗೂ ಸ್ಪರ್ಧೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳ ವಿವರವನ್ನು ವಿದ್ಯಾವಾಹಿನಿ ವೆಬ್ ಪೋರ್ಟಲ್ ನಲ್ಲಿ ನೋಂದಣಿ ಕಾರ್ಯ | 02.06.2023 ರಿಂದ 19.06.2023 | ಶಾಲಾ ಹಂತದಲ್ಲಿ |
| 2 | ತಾಲ್ಲೂಕು ಮಟ್ಟದ ಸ್ಪರ್ಧೆ (ಆಯಾ ಶಾಲಾ ಹಂತದಲ್ಲಿ ಆನ್‌ಲೈನ್ ಮೂಲಕ) | 20.06.2023 ರಿಂದ 23.06.2023 | ಸಂಬಂಧಿಸಿದ ಶಾಲಾ ಹಂತದಲ್ಲಿ ಆನ್‌ಲೈನ್ ಮೂಲಕ |
| 3 | ಪೂರ್ವ ಜಿಲ್ಲಾ ಮಟ್ಟ (ಎಲಿಮಿನೇಷನ್ ರೌಂಡ್ ಆಫ್‌ಲೈನ್ ಮೂಲಕ) | 27.06.2023 | ಆಯ್ದ 15 ಜಿಲ್ಲಾ ಕೇಂದ್ರಗಳಲ್ಲಿ |
| 4 | ಜಿಲ್ಲಾ ಮಟ್ಟದ ಸ್ಪರ್ಧೆ (ಆಯಾ ಜಿಲ್ಲಾ ಹಂತದಲ್ಲಿ ಆಫ್‌ಲೈನ್ ಮೂಲಕ) | 27.06.2023 | |
| 5 | ಪೂರ್ವ ರಾಜ್ಯ ಮಟ್ಟದ ಸ್ಪರ್ಧೆ (ಎಲಿಮಿನೇಷನ್ ರೌಂಡ್ ಆಫ್‌ಲೈನ್ ಮೂಲಕ) | 01.07.2023 | ಸಂಬಂಧಿಸಿದ ಶಾಲಾ ಹಂತದಲ್ಲಿ ಆನ್‌ಲೈನ್ ಮೂಲಕ |
| 6 | ರಾಜ್ಯ ಮಟ್ಟದ ಸ್ಪರ್ಧೆ (ಆಫ್‌ಲೈನ್ ಮೂಲಕ) | 05.07.2023 | ಬೆಂಗಳೂರು |
| 7. | ರಾಷ್ಟ್ರ ಮಟ್ಟದ ಸ್ಪರ್ಧೆ (ಆಫ್‌ಲೈನ್ ಮೂಲಕ) | ದಿನಾಂಕವನ್ನು ತಿಳಿಸಲಾಗುವುದು. | ಮುಂಬೈ |

(ವೇಳಾ ಪಟ್ಟಿಯು ತಾತ್ಕಾಲಿಕ ಬದಲಾವಣೆಗೆ ಒಳಪಟ್ಟಿರುತ್ತದೆ. ವಿದ್ಯಾವಾಹಿನಿ ಪೋರ್ಟಲ್ ನ್ನು ವೀಕ್ಷಿಸುತ್ತಿರುವುದು).

ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ ಕರ್ನಾಟಕ,
ಬೆಂಗಳೂರು

**ಅಗತ್ಯ ಕ್ರಮಕ್ಕಾಗಿ,**

1. ಮಾನ್ಯ ಆಯುಕ್ತರು, ಕರ್ನಾಟಕ ವಸತಿ ನಿಲಯ ಸಂಸ್ಥೆಗಳ ಸಂಘ. ಬಹು ಮಹಡಿಗಳ ಕಟ್ಟಡ, ಬೆಂಗಳೂರು. ರವರಿಗೆ ಸಲ್ಲಿಸುತ್ತಾ ಸದರಿ ಮಾಹಿತಿಯನ್ನು ರಾಜ್ಯದ ಎಲ್ಲಾ ವಸತಿ ಶಾಲೆಗಳ) ಮುಖ್ಯಸ್ಥರಿಗೆ ತಿಳಿಸಲು ಕೋರಿದೆ.

2. ಮಾನ್ಯ ಆಯುಕ್ತರು,ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. ಬೆಂಗಳೂರು ರವರಿಗೆ ಸಲ್ಲಿಸುತ್ತಾ ಸದರಿ ಮಾಹಿತಿಯನ್ನು ಬೆಂಗಳೂರು ಮಹಾನಗರ ಪಾಲಿಕೆ ಶಾಲೆಗಳ ಮುಖ್ಯಸ್ಥರಿಗೆ ತಿಳಿಸಲು ಕೋರಿದೆ.
3. ಮಾನ್ಯ ಆಯುಕ್ತರು. ನಗರಾಭಿವೃದ್ಧಿ ಇಲಾಖೆ. ಬೆಂಗಳೂರು ರವರಿಗೆ ಸಲ್ಲಿಸುತ್ತಾ ಸದರಿ ಮಾಹಿತಿಯನ್ನು ರಾಜ್ಯದ ಎಲ್ಲಾ ಮಹಾ ನಗರ ಪಾಲಿಕೆಗಳು, ನಗರಗಳು ಹಾಗೂ ಪುರಸಭೆಗಳ ಮುಖ್ಯಸ್ಥರಿಗೆ ಸೂಚಿಸಿ , ನಗರ ಸ್ಥಳೀಯ ಶಾಲೆಗಳ (Urbun Local Body Schools ) ಮುಖ್ಯಸ್ಥರಿಗೆ ತಿಳಿಸಲು ಕೋರಿದೆ.
4. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ.
5. ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ.

**ಮಾಹಿತಿಗಾಗಿ,**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ. ಬಹು ಮಹಡಿಗಳ ಕಟ್ಟಡ, ಬೆಂಗಳೂರು.
2. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ. ನೃಪತುಂಗ ರಸ್ತೆ, ಬೆಂಗಳೂರು
3. ಅಪರ ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಧಾರವಾಡ ಹಾಗೂ ಗುಲ್ಬರ್ಗಾ.
4. ವಿಭಾಗೀಯ ಸಹನಿರ್ದೇಶಕರು. ಮೈಸೂರು, ಧಾರವಾಡ, ಕಲ್ಬುರ್ಗಿ, ಬೆಂಗಳೂರು.
5. ಜನರಲ್ ಮ್ಯಾನೇಜರ್, FIDD ಆರ್‌ಬಿಐ, ಕೆ ಆರ್.ವೃತ್, ನೃಪತುಂಗ ರಸ್ತೆ, ಬೆಂಗಳೂರು-01
6. ಕಛೇರಿ ಪ್ರತಿ